ಪ್ರತಿಯೊಂದು ಕತೆಯೂ ಒಂದು ನಿರ್ದಿಷ್ಟ ಸೃಷ್ಟಿ. ನಾನೀಗ ಬರೆಯುತ್ತಿರುವ ಕತೆಯ ಶಬ್ದಗಳು ಹಿಂದೆಂದೂ ಯಾರೂ ಬಳಸಿರದ ಶಬ್ದಗಳು. ಕತೆ ಶಬ್ದಗಳನ್ನು ಹೊಸದು ಮಾಡುತ್ತದೆ, ಹೊಳೆಯಿಸುತ್ತದೆ. ಪ್ರಪಂಚದ ಶ್ರೇಷ್ಠ ಕತೆಗಳು ಯಾವುವೆಂದರೆ ಓದುಗರಿಗೆ ಹೊಸವೆನ್ನಿಸುವ, ಸದಾ ಹೊಸವೆನ್ನಿಸುವ ಕತೆಗಳು. ಯಾಕೆಂದರೆ ಆ ಕತೆಗಳಲ್ಲಿ ಸದಾಕಾಲವೂ ಏನೇನನ್ನೋ ಧ್ವನಿಸುವ ಶಕ್ತಿ ಇರುತ್ತದೆ.

ನಾನು ಹೇಗೆ ಕತೆ ಬರೆಯುತ್ತೇನೆ? ನನ್ನದೇ ರೀತಿಯಲ್ಲಿ. ಅದಕ್ಕೊಂದು ಪ್ರಕ್ರಿಯೆಯಿದೆಯೆಂದು ಹೇಳಲಾಗದು. ನನ್ನ ಕತೆ ಪ್ರಾರಂಭವಾಗುವಾಗ ಹೇಗಿರುತ್ತದೋ ಹಾಗೆಯೇ ಅಂತ್ಯವಾಗುವುದಿಲ್ಲ. ನಾನು ಬರೆಯುತ್ತಿರುವಾಗಲೇ ನನ್ನ ಕತೆಗೇನೋ ಆಗುತ್ತದೆ. ಅಥವಾ ನನ್ನ ಕತೆ 'ಸಂಭವಿಸು'ತ್ತದೆ. ಹಾಗೆ ಸಂಭವಿಸಿದ್ದು ಓದುಗರಲ್ಲೂ ಸಂಭವಿಸುತ್ತದೆ.

ಸಣ್ಣಕತೆಗಾರನ ಸಮಸ್ಯೆಯೆಂದರೆ ತಾನು ವಿವರಿಸುತ್ತಿರುವ ಕ್ರಿಯೆ ಮಾನವ ಅಸ್ತಿತ್ವದ ನಿಗೂಢವನ್ನು ಎಷ್ಟು ಸಾಧ್ಯವೋ ಅಷ್ಟು ಧ್ವನಿಸುವುದು ಹೇಗೆ ಎನ್ನುವುದು. ಸಣ್ಣಕತೆಯ ಪ್ರಕಾರದಲ್ಲಿ ಅವನಿಗೆ ಹೆಚ್ಚು ಅವಕಾಶವಿಲ್ಲ; ಬರಿಯ ಹೇಳಿಕೆಗಳಿಂದಲೂ ಪ್ರಯೋಜನವಿಲ್ಲ. ಅವನಿಗೆ ಮುಖ್ಯವಾದದ್ದು ಏನನ್ನೋ ಹೇಳುವುದಲ್ಲ, ಏನನ್ನೋ ತೋರಿಸುವುದು. ಅದನ್ನು ಅವನು ಸಾಧಿಸಬೇಕಾದ್ದು ಹೇಳುವುದರಿಂದಲ್ಲ, ಸಾಕಷ್ಟು ಮೂರ್ತವಾಗಿ ತೋರಿಸುವುದರಿಂದ.

ಸಣ್ಣದಾಗಿರುವುದಷ್ಟೇ ಸಣ್ಣಕತೆಯ ಮುಖ್ಯ ಲಕ್ಷಣವಲ್ಲ. ಸಣ್ಣಕತೆ ಸಣ್ಣದೆಂದು ತೋರದಂತೆ ಮಾಡುವುದರಲ್ಲೇ ಅದರ ಯಶಸ್ಸು. ಕತೆಯಲ್ಲಿ ಅರ್ಥ ಮುಖ್ಯವೇ ಹೊರತು ಕತೆಯ ವಸ್ತು ಅಲ್ಲ. ಅನೇಕ ಮಂದಿ ಓದುಗರು ಕತೆಯ ವಸ್ತುವಿನ ಬಗ್ಗೆ ಮಾತಾಡುವುದುಂಟು. ಕತೆಯಲ್ಲಿ ವಸ್ತುವೆನ್ನುವುದು ಪ್ರತ್ಯೇಕವಾಗಿ ಉಳಿದಿರುವುದಿಲ್ಲ. ನಾವೇನಾದರೂ ಒಂದು ಕತೆಯ ವಸ್ತುವನ್ನು ವಿವರಿಸಬಲ್ಲೆವಾದರೆ ಆ ಕತೆ ಒಳ್ಳೆಯ ಕತೆಯಾಗಿರಲಿಕ್ಕಿಲ್ಲ. ಒಂದು ಕತೆಯ ಅರ್ಥ ಆ ಕತೆಯೊಳಗೇ ಅಂತರ್ಗತವಾಗಿರುತ್ತದೆ, ಮೂರ್ತವಾಗಿರುತ್ತದೆ. ಕತೆಯೆನ್ನುವುದು ಅನುಭವವನ್ನು ಹೇಳುವ ಒಂದು ವಿಧಾನ; ಸಣ್ಣಕತೆಯ ಆಕೃತಿಯನ್ನು ಬಿಟ್ಟು ಬೇರೆ ಯಾವ ರೀತಿಯಿಂದಲೂ ಹೇಳಲಾಗದ ವಿಧಾನ.

ಸಣ್ಣಕತೆಯಲ್ಲಿ ಒಂದು ಬಗೆಯ ನಾಟಕೀಯ ಕ್ರಿಯೆಯಿರುತ್ತದೆ. ಹಾಗೆ ನೋಡಿದರೆ, ಒಳ್ಳೆಯ ಕತೆಗಳಲ್ಲಿ ಪಾತ್ರಗಳು ಅನಾವರಣಗೊಳ್ಳುವುದೇ ಕ್ರಿಯೆಯ ಮೂಲಕ. ಆ ಕ್ರಿಯೆ ನಿಯಂತ್ರಣಗೊಳ್ಳುವುದು ಕೂಡ ಪಾತ್ರಗಳ ಮೂಲಕವೇ. ಇದರ ಪರಿಣಾಮವಾಗಿ ನಿರೂಪಿಸಲ್ಪಟ್ಟ ಇಡೀ ಅನುಭವದಿಂದಲೇ ಅರ್ಥವೊಂದು ಹೊಮ್ಮುತ್ತದೆ.

ಕತೆಗಾರನಿಗೆ ಅವನು ಬರೆದ ಕತೆಯ ಆಯಾಮಗಳು, ಅದನ್ನು ಬರೆದು ಮುಗಿಸುವವರೆಗೂ ಗೊತ್ತಾಗುವುದಿಲ್ಲ. ನನ್ನ 'ಕ್ರೌರ್ಯ' ಕತೆಗೆ ಸಂಬಂಧಿಸಿದಂತೆ ಹೇಳುವುದಾದರೆ ಮೆಜೆಸ್ಟಿಕ್ಕಿನಲ್ಲಿ ಕಂಡ ಹೆಳವಿಯೊಬ್ಬಳು ಎಷ್ಟೋ ವರ್ಷಗಳಾದ ನಂತರ ಯಾಕೆ ಮದರಾಸಿನ ಮಡಿವಂತ, ಆಚಾರವಂತ ಕುಟುಂಬವೊಂದರ ಮಗಳಾದಳು? ಅವಳ ಏಕಾಕಿತನ ಒಂದು ಕಾಲದ ನನ್ನದೇ ಏಕಾಕಿತನದ ಪ್ರತಿರೂಪವಾಗಿರದೆ? ಆ ಕತೆಯಲ್ಲಿ ನಾನೊಂದು ಚೂರಿಯನ್ನು ತಂದೆ – ಯಾಕೆ ಎಂದು ಗೊತ್ತಿಲ್ಲದೆ. ಆದರೆ ಅದೇ ಆ ಹೆಳವಿಯ ಸಾವಿಗೆ ಕಾರಣವಾಗಬಹುದೆಂದು ಕೊನೆಯವರೆಗೂ ನನಗೆ ತಿಳಿದಿರಲಿಲ್ಲ. ವಿಮರ್ಶಕರು ಕೆಲವರು ಆ ಕತೆಯ ಶೀರ್ಷಿಕೆಯಂತೆ ಚೂರಿಯೂ ಒಂದು ಸಂಕೇತವಾಗಿದೆಯೆಂದು ಬರೆದಾಗ ನನಗಾದ ಆಶ್ಚರ್ಯ ಅಷ್ಟಿಷ್ಟಲ್ಲ.

1970ರಷ್ಟು ಹಿಂದೆ ಮದರಾಸಿನಲ್ಲಿ ಸುಮಾರು 50 ಮೂಕಿ ಚಿತ್ರಗಳ ಉತ್ಸವವೊಂದು